ಭಾರಿ, ಮಧ್ಯಮ ಹಾಗೂ ಗಂಗಾ ಕಲ್ಯಾಣ ಯೋಜನೆಗಳ ಬಗ್ಗೆ

೩೩೩. ಶ್ರೀ ಬಿ. ರಾಜುಗೌಡ (ಹನೂರು).—ಮಾನ್ಯ ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರಾರಂಭ ಮಾಡಿರುವ ಮತ್ತು ಪೂರೈಸಿರುವ ಭಾರಿ, ಮಧ್ಯಮ ಹಾಗೂ ಗಂಗಾ ಕಲ್ಯಾಣ ಯೋಜನೆಗಳೆಷ್ಟು ?

ಆ) ಸದರಿ ಕೆಲಸಗಳಿಗೆ ಇದುವರೆವಿಗೆ ಹಾಗಿರುವ ವೆಚ್ಚವೆಷ್ಟು ?

ಇ) ಇದರಿಂದ ಎಷ್ಟು ಎಕರೆ ಪ್ರದೇಶಕ್ಕೆ ನೀರಿನ ಸೌಲಭ್ಯ ದೊರೆತಿದೆ ?

ಈ) ಸರ್ಕಾರ ಕೈಗೊಂಡಿರುವ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಎಷ್ಟು ಹಣ ಬೇಕಾಗುತ್ತದೆ ?

ಉ) ಎಲ್ಲಾ ಯೋಜನೆಗಳು ಪೂರ್ಣಗೊಂಡಾಗ ರಾಜ್ಯದ ಹಿಡುವಳಿ ಭೂಮಿಯಲ್ಲಿ ಎಷ್ಟು ಭಾಗ ನೀರಾವರಿಯಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ರಾಜ್ಯದಲ್ಲಿ ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪ್ರಾರಂಭಿಸಿದ ಯೋಜನೆಗಳ ವಿವರ ಈ ರೀತಿ ಇದೆ.

೧	ಭಾರಿ ಯೋಜನೆ	...	೧
೨	ಮಧ್ಯಮ ಯೋಜನೆ	...	೧
೩	ಗಂಗಾ ಕಲ್ಯಾಣ ಯೋಜನೆಗಳು	...	೧೦೦೧

ಪೂರೈಸಿರುವ ಯೋಜನೆಗಳ ವಿವರಗಳು ಈ ರೀತಿ ಇದೆ. (ಜುಲೈ ೧೯೮೭ ರವರೆಗೆ)

೧	ಮಧ್ಯಮ ನೀರಾವರಿ ಯೋಜನೆಗಳು	...	೨
೨	ಗಂಗಾ ಕಲ್ಯಾಣ ಯೋಜನೆಗಳು	...	೨೪೬

ಆ) ಜುಲೈ ೧೯೮೭ರ ವರೆಗೆ ಈ ಯೋಜನೆಗಳಿಗೆ ಆಗಿರುವ ವೆಚ್ಚ ೯೩೪ ಲಕ್ಷ ರೂಪಾಯಿಗಳು.

ಇ) ಮುಗಿಸಿರುವ ಯೋಜನೆಗಳಿಂದ ನೀರಾವರಿ ಸೌಲಭ್ಯ ಪಡೆದಿರುವ ವಿಸ್ತೀರ್ಣ ೪೭೬೫ ಹೆಕ್ಟೇರುಗಳು (೧೧೭೭೫ ಎಕರೆಗಳು)

ಈ) ೨೭೯೦ ಕೋಟಿ ರೂಪಾಯಿಗಳು. (ಈಗಿನ ಅಂದಾಜಿನ ಪ್ರಕಾರ)

ಉ) ಗರಿಷ್ಟ ನೀರಾವರಿ ಸಾಮರ್ಥ್ಯದ (೫೫ ಲಕ್ಷ ಹೆಕ್ಟೇರುಗಳ) ಶೇ. ೬೮ ಭಾಗ.

ಚಿಂಚೋಳಿ ತಾಲ್ಲೂಕಿನಲ್ಲಿರುವ ಚಂದ್ರಂಪಳ್ಳಿ ಮಧ್ಯಮ ನೀರಾವರಿ ಯೋಜನೆ ಬಗ್ಗೆ.

೭೩. ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಂಚೋಳಿ ತಾಲ್ಲೂಕಿನಲ್ಲಿರುವ ಚಂದ್ರಂಪಳ್ಳಿ ಮಧ್ಯಮ ನೀರಾವರಿ ಯೋಜನೆಯಡಿ ಒಟ್ಟು ಆಯಕಟ್ಟು ಪ್ರದೇಶವೆಷ್ಟು ?

ಆ) ಪ್ರಸ್ತುತ ನೀರಾವರಿಯಾಗುತ್ತಿರುವ ಜಮೀನೆಷ್ಟು ?

ಇ) ನೀರಾವರಿ ಕಾಲುವೆಗಳು ದುಸ್ಥಿತಿಯಲ್ಲಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೆ ?

ಈ) ಈ ಕಾಲುವೆಗಳನ್ನು ದುರಸ್ತಿ ಮಾಡಲು ಕೈಗೊಂಡ ಕ್ರಮಗಳೇನು ?